# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66/2021

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಅರ್ಜುನ | ಪ್ರಾಸಾಃ | 11 |
| **ತಂದೆಯ ಹೆಸರುಃ** | ವೆಂಕಟೇಶ | ಚಾಸಾಃ | 16 |
| **ವಯಸ್ಸುಃ** | 30 | ಪ್ರಮಾಣ ವಚನ ಭೋದಿಸಿದ ದಿನಾಂಕ | 11.07.2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ಶಿಡ್ಲಘಟ್ಟ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿಗಳು ಹಾಗೂ ಮೃತ ಗೊತ್ತಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಚಾಸಾ-15 ರವರ  ಬಳಿ ಒಂದು ಮಾರುತಿ ವ್ಯಾನ್ ಇತ್ತು. 4 ನೇ ಆರೋಪಿ ದೇವಸ್ಥಾನಕ್ಕೆ  ಹೋಗಲು ವ್ಯಾನ್  ಪಡೆದುಕೊಂಡಿಲ್ಲ. ಈಗ ತೋರಿಸಿದ ಮಹಜರ್ ನಲ್ಲಿ ಇರುವ ಸಹಿ ನನ್ನದು. ಅದನ್ನು ನಿಪಿ-54 ಎಂದು, ಸಹಿಯನ್ನು 54 ಬಿ ಎಂದು ಗುರುತಿಸಲಾಯಿತು. ಒಂದು ಅಪಘಾತನ ಸಂಬಂಧ ಪೋಲಸರು ಸದರಿ ಸಹಿ ಪಡೆದಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 19.03.2021 ರಂದು ಬೆಳಿಗ್ಗೆ 9.00 ಸಮಯದಲ್ಲಿ 3 ಮತ್ತು 4 ನೇ ಆರೋಪಿತರು ಚಾಸಾ-15 ರವರ  ಬಳಿ ಇದ್ದ ಕೆಎ-40-ಎಂ-1633 ಒಮಿನಿ ಕಾರನ್ನು

ದೇವಸ್ಥಾನಕ್ಕೆ ಹೋಗಿಬರಲು ತೆಗೆದುಕೊಂಡು ಹೋಗಿದ್ದು ಸದರಿ ವಾಹನವನ್ನು ಕೊಲೆ ಪ್ರಕರಣದಲ್ಲಿ ಬಳಸಿದ ಬಗ್ಗೆ ಮಾಹಿತಿ ತಿಳಿದು ಪೋಲಿಸರಲ್ಲಿ ನಾನು-------- ಮಾಡಿರುತ್ತೇನೆ ಎಂದು ನಿಪಿ-56 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿ ನಂತರ ಪೋಲಿಸರು ಸದರಿ ವಾಹನ ಅಮಾನತುಪಡಿಸಿಕೊಳ್ಳುವಾಗ ಹಾಗೂ ನನ್ನ ಮನೆಯ ಸಿಸಿ ಪೂಟೇಜ್ ಅಮಾನತುಪಡಿಸಿಕೊಳ್ಳುವಾಗ ಪಂಚನಾಗಿ ಸಹಿ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಆರ್ ಸಿ ಎಸ್ .ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 11.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.